## ಜಗಳ ಜಾಸ್ತಿ ಆಗುತ್ತೆ!

ಪಕ್ಕದ ಮನೆ ನಳಿನಿ ಮತ್ತು ಅವಳ ಗಂಡನ ಜಗಳ ತಾರಕಕ್ಕೇರಿತ್ತು. ಇದನ್ನು ಕೇಳಿಸಿಕೊಂಡ ಲಲಿತಾ ತನ್ನ ಗಂಡ ಮಹೇಶನಿಗೆ 'ರೀ ಅವರು ಯಾಕೋ ಜಗಳ ಆಡುತ್ತಿದ್ದಾರೆ, ನೀವು ಹೋಗಿ ಸಮಾಧಾನ ಮಾಡಿ ಜಗಳ ಬಿಡಿಸಿ ಬನ್ನಿ' ಎಂದಳು.

ಅದಕ್ಕೆ ಮಹೇಶ 'ಈಗ ನಾನು ಹೋದರೆ ಅವರು ಮತ್ತಷ್ಟು ಜೋರಾಗಿ ಜಗಳ ಮಾಡುತ್ತಾರೆ' ಎಂದ. ಆಗ ಆಕೆ 'ಅಲ್ರೀ ನೀವು ಹೋದರೆ ಏಕೆ ಜಗಳ ಜಾಸ್ತಿ ಮಾಡುತ್ತಾರೆ?' ಎಂದಳು.

ಅದಕ್ಕೆ ಅವನು 'ಹೌದು ಕಣೇ. ನಾನು ನಿನ್ನೆ ಅವರ ಮನೆಗೆ ಹೋಗಿ ಬಂದಿದ್ದಕ್ಕೆ ಈಗ ಅವರು ಜಗಳ ಮಾಡುತ್ತಾ ಇರೋದು' ಎಂದ!

**ಶಂಕರೇಗೌಡ ತುಂಬಕೆರೆ**



ಕಲೆ: ಗಣೇಶ ಆಚಾರ್ಯ

---

## ನಾಯಿ ಯಾರು?

ಪದ್ದಿ ಮತ್ತು ಗುಂಡನದು ಆದರ್ಶ ದಾಂಪತ್ಯ. ಇಂಥದರಲ್ಲಿ ಗುಂಡ ಸಹವಾಸದಿಂದ ಕುಡಿಯುವುದನ್ನು ಕಲಿತ. ಇದು ಪದ್ದಿಗೆ ಇಷ್ಟವಾಗಲಿಲ್ಲ. ಕುಡಿಯುವುದನ್ನು ಬಿಡಿಸಲು ಪರಿಪರಿಯಾಗಿ ಪ್ರಯತ್ನಿಸಿದಳು. ಎನೇ ಮಾಡಿದರೂ ಗುಂಡ ಕುಡಿಯುವುದನ್ನು ನಿಲ್ಲಿಸಲಿಲ್ಲ.

ಒಂದು ದಿನ ಪದ್ದಿ ಗುಂಡನ ಎದುರಿನಲ್ಲಿಯೇ ಮನೆಯಲ್ಲಿ ಸಾಕಿದ ನಾಯಿಗೆ ಅದರ ಪ್ಲೇಟಿನಲ್ಲಿ ಗುಂಡ ಕುಡಿದು ಉಳಿಸಿದ್ದ ವಿಸ್ಕಿಯನ್ನು ಹಾಕಿದಳು. ನಾಯಿ ಅದನ್ನು ಮೂಸಿ ನೋಡಿ ಹಿಂದಕ್ಕೆ ಸರಿಯಿತು. ವಿಸ್ಕಿಯನ್ನು ಚೆಲ್ಲಿ ಪ್ಲೇಟನ್ನು ತೊಳೆದು ಅದರಲ್ಲಿ ಹಾಲನ್ನು ಹಾಕಿ ನಾಯಿಯ ಮುಂದೆ ಇಟ್ಟಳು. ನಾಯಿ ಹಾಲನ್ನು ಕುಡಿಯತೊಡಗಿತು. 'ನೋಡಿದ್ರಾ! ಇದರಿಂದ ನಿಮಗೇನು ಅರ್ಥವಾಯಿತು?'




ಎಂದಳು ಪದ್ದಿ. 'ವಿಸ್ಕಿ ಕುಡಿಯದವರು ನಾಯಿಗೆ ಸಮ ಅಂತ ಅರ್ಥ' ಕೂಲಾಗಿ ಗುಂಡ ಹೇಳಿದ. ಕೇಳಿದ ಪದ್ದಿ ಶಾಕ್!

**ಭೋಜರಾಜ ಸೊಪ್ಪಿಮಠ**